17/9/2021

## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 746 |
| ಉತ್ತರಿಸಬೇಕಾದ ದಿನಾಂಕ | : | 17.09.2021. |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. |

<table>
<tr><th>ಕ್ರ.ಸ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕ್ರೀಡಾಂಗಣ ನಿರ್ವಹಣೆಗೆ ಹಾಗೂ ಕ್ರೀಡಾ ಶಾಲೆ/ವಸತಿ ನಿಲಯಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು;</td><td>ಬೀದರ್ ಜಿಲ್ಲೆಯ ಜಿಲ್ಲಾ ಪಂಚಾಯತ್ ವಲಯದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ:-<br><br>ಕ್ರೀಡಾ ಶಾಲೆ ಲೆಕ್ಕ ಶೀರ್ಷಿಕೆ :2205-00-104-0-29
<table>
<tr><th>ಕ್ರಸ</th><th>ವರ್ಷ</th><th>ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>2018-19</td><td>11.00</td></tr>
<tr><td>2</td><td>2019-20</td><td>13.00</td></tr>
<tr><td>3</td><td>2020-21</td><td>13.00</td></tr>
<tr><td></td><td>ಒಟ್ಟು</td><td>37.00</td></tr>
</table>
<br>ಕ್ರೀಡಾಂಗಣ ನಿರ್ವಹಣೆ ಲೆಕ್ಕ ಶೀರ್ಷಿಕೆ :2205-00-104-0-28
<table>
<tr><th>ಕ್ರಸ</th><th>ವರ್ಷ</th><th>ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>2018-19</td><td>32.16</td></tr>
<tr><td>2</td><td>2019-20</td><td>48.00</td></tr>
<tr><td>3</td><td>2020-21</td><td>30.81</td></tr>
<tr><td></td><td>ಒಟ್ಟು</td><td>110.97</td></tr>
</table>
<br>ರಾಜ್ಯ ವಲಯದ ಅನುದಾನದಿಂದ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳ ಊಟೋಪಹಾರ ಮತ್ತಿತರ ಬಾಬ್ತು 2018-19 ರಲ್ಲಿ ರೂ.19.58 ಲಕ್ಷ ಹಾಗೂ 2019-20ನೇ ಸಾಲಿನಲ್ಲಿ ರೂ.24.20 ಲಕ್ಷ ವೆಚ್ಚ ಭರಿಸಲಾಗಿದೆ. 2020-21 ನೇ ಸಾಲಿನಲ್ಲಿ ರಾಜ್ಯ ವಲಯದಿಂದ ಈ ಬಾಬ್ತಿನಲ್ಲಿ ಯಾವುದೇ ವೆಚ್ಚ ಭರಿಸಿರುವುದಿಲ್ಲ. ರಾಜ್ಯ ವಲಯದಿಂದ ಸ್ವಚ್ಛತೆ, ಭದ್ರತೆ, ವಿದ್ಯುತ್, ನೀರು ಮತ್ತಿತರ ಕ್ರೀಡಾಂಗಣಗಳ ನಿರ್ವಹಣೆ ಬಾಬ್ತು 2021-22 ನೇ ಸಾಲಿನಲ್ಲಿ ರೂ 26.72 ಲಕ್ಷ ಮಂಜೂರು ಮಾಡಲಾಗಿದೆ.</td></tr>
</table>

| | | |
|---|---|---|
| ಆ. | ಇಲಾಖೆಯಲ್ಲಿ ಹಾಗೂ ಕ್ರೀಡಾ ವಸತಿ ಶಾಲೆ/ವಸತಿ ಶಾಲೆಯಲ್ಲಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಲಿ ಇದ್ದಲ್ಲಿ, ಭರ್ತಿ ಮಾಡುವುದು ಯಾವಾಗ (ವಿವರ ನೀಡುವುದು) | ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೀದರ್ ಜಿಲ್ಲೆ ಇಲ್ಲಿ ಒಟ್ಟು 05 ಮಂಜೂರಾದ ಹುದ್ದೆಗಳಿದ್ದು, ಪ್ರಸ್ತುತ ಅಧೀಕ್ಷಕರ 01 ಹುದ್ದೆ ಭರ್ತಿಯಾಗಿದ್ದು, 04 ಹುದ್ದೆಗಳು ಖಾಲಿ ಇರುತ್ತವೆ. ಸಹಾಯಕ ನಿರ್ದೇಶಕರ ಒಂದು ಹುದ್ದೆ ಭರ್ತಿಗೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಗುಂಪು ಡಿ ನೌಕರರ 02 ಹುದ್ದೆಗಳನ್ನು ಹೊರ ಗುತ್ತಿಗೆ ಆಧಾರದಲ್ಲಿ ಪಡೆಯಲು ಅನುಮತಿ ನೀಡಲಾಗಿದೆ. ಕ್ರೀಡಾ ವಸತಿ ನಿಲಯಕ್ಕೆ ಪ್ರತ್ಯೇಕವಾಗಿ ಯಾವುದೇ ಹುದ್ದೆಗಳು ಮಂಜೂರಾಗಿರುವುದಿಲ್ಲ. ಕರ್ನಾಟಕ ಕ್ರೀಡಾ ಪ್ರಾಧಿಕಾರದ 02 ತರಬೇತುದಾರರು ಕ್ರೀಡಾ ವಸತಿ ನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.<br>ಕ್ರೀಡಾಂಗಣಗಳ ನಿರ್ವಹಣೆಗೆ ವಿವಿಧ ವೃಂದದ 18 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಸೇವೆ ಪಡೆಯಲಾಗಿದೆ. |
| ಇ. | ಜಿಲ್ಲೆಯಲ್ಲಿ ಎಷ್ಟು ಗ್ರಾಮೀಣ ಕ್ರೀಡಾ ಕೇಂದ್ರಗಳನ್ನು ನಿರ್ಮಿಸಲಾಗಿದೆ; ಅದಕ್ಕೆ ಎಷ್ಟು ಅನುದಾನ ನೀಡಲಾಗಿದೆ; ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹಧನ ಮತ್ತು ಖರೀದಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ; (ವಿವರ ನೀಡುವುದು) | ಬೀದರ್ ಜಿಲ್ಲೆಯಲ್ಲಿರುವ 8 ತಾಲ್ಲೂಕುಗಳಲ್ಲಿ ಒಟ್ಟು 40 ಗ್ರಾಮೀಣ ಕ್ರೀಡಾ ಕೇಂದ್ರಗಳಿವೆ. ಗ್ರಾಮೀಣ ಪ್ರೌಢಶಾಲೆ/ ಪ್ರಾಥಮಿಕ ಶಾಲೆಗಳಲ್ಲಿ ಗ್ರಾಮೀಣ ಪ್ರದೇಶ ಕ್ರೀಡಾಭಿವೃದ್ಧಿಗಾಗಿ ಜಿಲ್ಲಾ ಪಂಚಾಯತ್ ಲೆಕ್ಕ ಶೀರ್ಷಿಕೆ: 2205-00-104-0-31 ಅಡಿಯಲ್ಲಿ 2020-21 ನೇ ಸಾಲಿನಲ್ಲಿ ರೂ 11.00 ಲಕ್ಷ ಬಿಡುಗಡೆ ಮಾಡಿದ್ದು, ಇದರಲ್ಲಿ ರೂ 9.92 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. |
| ಈ. | ಜಿಲ್ಲೆಯಲ್ಲಿ ಕ್ರೀಡಾ ಸಾಮಗ್ರಿಗಳನ್ನು ಕೊಳ್ಳಲು ಮತ್ತು ಆಟದ ಮೈದಾನವನ್ನು ಅಭಿವೃದ್ಧಿಗೊಳಿಸಲು ಹಾಗೂ ಯುವ ಜನ ಸೇವೆಗಳ ಮಂಡಳಿಗಳಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ? (ವಿವರ ನೀಡುವುದು) | ಕ್ರೀಡಾ ಸಾಮಗ್ರಿಗಳನ್ನು ಕೊಳ್ಳಲು ಮತ್ತು ಆಟದ ಮೈದಾನವನ್ನು ಅಭಿವೃದ್ಧಿಗೊಳಿಸಲು ಹಾಗೂ ಯುವ ಜನ ಸೇವೆಗಳ ಮಂಡಳಿಗಳಿಗೆ ಜಿಲ್ಲಾ ಪಂಚಾಯತ್ ಲೆಕ್ಕ ಶೀರ್ಷಿಕೆ: 2205-00-104-0-33 ಅಡಿಯಲ್ಲಿ ಈ ಕೆಳಕಂಡಂತೆ ಅನುದಾನವನ್ನು ಮೀಸಲಿಡಲಾಗಿದೆ:- |

| ಕ್ರಸ | ವರ್ಷ | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) | ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2018-19 | 2.29 | 2.29 |
| 2 | 2019-20 | 2.45 | - |
| 3 | 2020-21 | 2.45 | - |
| | **ಒಟ್ಟು** | **7.19** | **2.29** |

**ವೈಎಸ್‌ಡಿ/ಇಬಿಬಿ/141/2021**

**(ಡಾ. ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.